ಕರ್ನಾಟಕ ಸರ್ಕಾರ

ಸಂಖ್ಯೆ: ಜೆ.ಆರ್.ಓ/1(ಎ)/70/2016-17

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ
ಆಯುಕ್ತಾಲಯ, ಆನಂದರಾವ್ ವೃತ್ತ,
ಬೆಂಗಳೂರು, ದಿನಾಂಕ: 7-04-2017.

ಇವರಿಗೆ,

ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣಾಧಿಕಾರಿಗಳು,
---------------ಜಿಲ್ಲೆ.

**ವಿಷಯ:** ಗುತ್ತಿಗೆ ಆಧಾರದಲ್ಲಿ ನೇಮಕ ಹೊಂದಿರುವ ವೈದ್ಯಾಧಿಕಾರಿಗಳನ್ನು ಖಾಯಂಗೊಳಿಸುವ ಬಗ್ಗೆ.

**ಉಲ್ಲೇಖ:** 1 ಸರ್ಕಾರದ ಪತ್ರ ಸಂಖ್ಯೆ: ಆಕುಕ 27 ಹೆಚ್‌ಎಸ್‌ಹೆಚ್ 2017, ದಿನಾಂಕ: 10-01-2017 & ನೆನಪೋಲೆ ಪತ್ರ ದಿನಾಂಕ: 21-03-2017.
2 ಸಮ ಸಂಖ್ಯೆಯ ಪತ್ರ ದಿನಾಂಕ: 20-02-2017.

******

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸೇರಿದ ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವರ್ಗಾವಣೆ/ ಸೇವಾನಿರತ ಸ್ನಾತಕೋತ್ತರ ವ್ಯಾಸಂಗಕ್ಕಾಗಿ/ ನಿಯೋಜನೆ/ ಇತ್ಯಾದಿ ಕಾರಣಗಳಿಂದ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇದ್ದು, ಸಾರ್ವಜನಿಕ ಸೇವೆ ಒದಗಿಸಲು ತೊಂದರೆಯಾಗುತ್ತಿರುವುದರಿಂದ ಗ್ರಾಮೀಣ ಪ್ರದೇಶದಲ್ಲಿ ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಅನುಮತಿ ನೀಡಲಾಗಿತ್ತು. ಅದರಂತೆ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಂಜೂರಾಗಿರುವ ವೈದ್ಯಾಧಿಕಾರಿಗಳ ಹುದ್ದೆಯ ಖಾಲಿ ಹುದ್ದೆಯ ಎದುರಿಗೆ ಜಿಲ್ಲಾಧಿಕಾರಿಗಳ ಮುಖಾಂತರ ನೇಮಕಾತಿಯಾದ (ಎನ್.ಹೆಚ್.ಎಂ ಅಡಿಯಲ್ಲಿ ಆಯ್ಕೆಯಾದ ವೈದ್ಯರನ್ನು ಹೊರತುಪಡಿಸಿ) ಗುತ್ತಿಗೆ ವೈದ್ಯರುಗಳ ಮಾಹಿತಿಯನ್ನು ಪರಿಶೀಲಿಸಲು ಈ ಕೆಳಕಂಡ ದಾಖಲೆಗಳನ್ನು ಹಾಗೂ ಅನುಬಂಧದಲ್ಲಿ ಗುತ್ತಿಗೆ ವೈದ್ಯರ ಮಾಹಿತಿ ನಮೂದಿಸಿ ದಿನಾಂಕ: 20-04-2017ರ ಒಳಗೆ ಈ ಆಯುಕ್ತಾಲಯಕ್ಕೆ ಮುದ್ದಾಂ ಸಲ್ಲಿಸಲು ತಿಳಿಸಲಾಗಿದೆ.

1. ಗುತ್ತಿಗೆ ವೈದ್ಯರ ಎಸ್.ಎಸ್.ಎಲ್.ಸಿ ಅಂಕಪಟ್ಟಿ
2. ಶೈಕ್ಷಣಿಕ ಅರ್ಹತೆ ಪ್ರಮಾಣ ಪತ್ರಗಳ ಪಟ್ಟಿ ಎಂ.ಬಿ.ಬಿ.ಎಸ್ (ಅಂಕಪಟ್ಟಿ)
3. ಕೆ.ಎಂ.ಸಿ ನೊಂದಣಿ ಪ್ರಮಾಣ ಪತ್ರ
4. ನಿಯಮಾನುಸಾರ ರೋಸ್ಟರ್ ಕಮ್ ಮೆರಿಟ್ ಅಡಿ ನೇಮಕಾತಿ ಮಾಡಿಕೊಂಡ ಮಾಹಿತಿ.
5. ನೇಮಕಾತಿಗೆ ಹೊರಡಿಸಿದ ಜಾಹಿರಾತು ಪತ್ರದ ಪ್ರತಿ.
6. ನೇಮಕಾತಿ ಆದೇಶದ ಪ್ರತಿ.

-2..,

ಆಯುಕ್ತಾಲಯಕ್ಕೆ ಉಲ್ಲೇಖ(2)ರಂತೆ ಸಲ್ಲಿಸಿರುವ ಮಾಹಿತಿಯು ಎಲ್ಲಾ ಜಿಲ್ಲೆಯಿಂದ ಬಂದಿರುವುದಿಲ್ಲ, ಅದ್ದರಿಂದ ಆಯುಕ್ತಾಲಯಕ್ಕೆ ಮಾಹಿತಿ ನೀಡುವಾಗ ನಿಖರವಾದ ಮಾಹಿತಿ ಸಲ್ಲಿಸುವುದು, ಅಪೂರ್ಣ ಮಾಹಿತಿ/ ಸುಳ್ಳು ಮಾಹಿತಿ ನೀಡಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನೆ ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು ಮತ್ತು ನಿಗಧಿತ ಅವಧಿ ಒಳಗೆ ಎಲ್ಲಾ ಮಾಹಿತಿಗಳನ್ನು ಸಂಬಂಧಿಸಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಧೃಡೀಕರಣದೊಂದಿಗೆ ಸಲ್ಲಿಸುವುದು ನಿಗಧಿಪಡಿಸಿದ ದಿನಾಂಕದೊಳಗೆ ಪ್ರಸ್ತಾವನೆಯನ್ನು ಸಲ್ಲಿಸದೇ ಅಥವಾ ನಿಮ್ಮ ಜಿಲ್ಲೆಯ ಗುತ್ತಿಗೆ ವೈದ್ಯರ ಹೆಸರನ್ನು ನೀಡದೆ ಇದ್ದಲ್ಲಿ ಸಂಬಂಧಿಸಿದವರನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲು ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು.

ಆಯುಕ್ತರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

**ಪ್ರತಿಯನ್ನು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು- ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಮಾನ್ಯ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು- ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಎಲ್ಲಾ ಸಂಬಂಧಪಟ್ಟ ಗುತ್ತಿಗೆ ವೈದ್ಯಾಧಿಕಾರಿಗಳಿಗೆ.
4. ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸುವುದು.
5. ಕಛೇರಿ ಪ್ರತಿ.

# ಅನುಬಂಧ

## ಆರೋಗ್ಯ ಮತ್ತು ಕು.ಕ.ಇಲಾಖೆಯಲ್ಲಿ ದಿನಾಂಕ: 31-03-2017ರ ಅಂತ್ಯಕ್ಕೆ 3 ವರ್ಷ ಗುತ್ತಿಗೆ ವೈದ್ಯರಾಗಿ ಸೇವೆ ಸಲ್ಲಿಸಿದಂತಹ ಎಂಬಿಬಿಎಸ್ ವೈದ್ಯರ ಮಾಹಿತಿ

| ಕ್ರ. ಸಂ | ಗುತ್ತಿಗೆ ವೈದ್ಯರ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ (ನಗರ/ಗ್ರಾಮೀಣ) | ಅಧಿಸೂಚನೆಯ ಜಾಹಿರಾತಿನ ಪ್ರತಿ | ನೇಮಕಾತಿ ಆದೇಶ ಸಂಖ್ಯೆ | ವೇತನ ಸೆಳೆಯುತ್ತಿರುವ ಲೆಕ್ಕ ಶೀರ್ಷಿಕೆ | ಜನ್ಮ ದಿನಾಂಕ | ವಿದ್ಯಾರ್ಹತೆ | ಕೆ.ಎಂ.ಸಿ ನೊಂದಣಿ ಸಂಖ್ಯೆ ಮತ್ತು ದಿನಾಂಕ | ಗುತ್ತಿಗೆ ವೈದ್ಯರಾಗಿ ಸೇವೆಗೆ ಸೇರಿದ ದಿನಾಂಕ | ಆಯ್ಕೆಯಾದ ಪ್ರವರ್ಗ | ಸೇವಾವಿಚ್ಛಿನ್ನತೆ ಇಲ್ಲದೆ ಮುಂದುವರೆದು ಕಾರ್ಯನಿರ್ವಹಿಸುತ್ತಿರುವ ದಿನಾಂಕ | ಸೇವಾ ವಿಚ್ಛಿನ್ನತೆ | ಗೈರುಹಾಜರಾದ ಅವಧಿ | ಷರಾ |
|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| 1 | | | | | | | | | | | | | |
| 2 | | | | | | | | | | | | | |
| 3 | | | | | | | | | | | | | |
| 4 | | | | | | | | | | | | | |

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು

.............................................ಜಿಲ್ಲೆ.